ಸಿ.ಸಿ. ಸಂಃ 361/2015 ಪಿ.ಡಬ್ಲ್ಯು: 01

ದಿನಾಂಕ 02-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ. ಐ.ಎಸ್.ಎನ್ ಆರೋಪಿ ಪರ ವಕೀಲರಿಂದಃ

ನಿಡಿ-1 ಮತ್ತು 3 ರ ಸಮಯದಲ್ಲಿ ನನ್ನ ಹೆಂಡತಿ ಹಾಗೂ ಲಕ್ಷ್ಮೀ, ಜಯಮ್ಮ ಹಾಗೂ ಈ ಪ್ರಕರಣದ ಆರೋಪಿಯ ಮಧ್ಯೆ ವಿಶ್ವಾಸವು ಚೆನ್ನಾಗಿತ್ತು ಎಂದರೆ ಸರಿ. ನನ್ನ ಹೆಂಡತಿ ಹಾಗೂ ಲಕ್ಷ್ಮೀ, ಜಯಮ್ಮ ಹಾಗೂ ಈ ಪ್ರಕರಣದ ಆರೋಪಿಯು ಸಾಲವನ್ನು ಪಡೆಯುವಾಗ ಪರಸ್ಪರ ಒಬ್ಬರಿಗೊಬ್ಬರು ಜಾಮೀನುಗಳಾಗಿ ನಿಲ್ಲುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಚಿಟ್ ಫಂಡ್ ನಲ್ಲಿ 10 ಜನರಿದ್ದರು ಹಾಗೂ ಅವರೆಲ್ಲರೂ ತಮ್ಮ ಸಾಲಗಳಿಗೆ ಪರಸ್ಪರ ಒಬ್ಬರಿಗೊಬ್ಬರು ಜಾಮೀನುಗಳಾಗಿ ನಿಲ್ಲುತ್ತಿದ್ದರು ಎಂದು ನುಡಿಯುತ್ತಾರೆ.

ಜಯಮ್ಮ ಕೋಂ ಸುರೇಶ್ ಕುಮಾರ್ ಎಂದರೆ ನನ್ನ ಹೆಂಡತಿ. ಲಕ್ಷ್ಮೀ ಕೋಂ ಆನಂದರವರು ನನ್ನ ಹೆಂಡತಿ ಫ್ಯೂಚರ್ ಫೈನಾನ್ಸಿಯಲ್ ಸರ್ವಿಸಸ್ ಲಿಮಿಟೆಡ್ ನಿಂದ ಸಾಲವನ್ನು ಪಡೆದಾಗ ಗ್ಯಾರಂಟಿಯಾಗಿ ನಿಂತಿದ್ದರು ಎಂದು ಫ್ಯೂಚರ್ ಫೈನಾನ್ಸಿಯಲ್ ಸರ್ವಿಸಸ್ ಲಿಮಿಟೆಡ್ ರವರು ದಿನಾಂಕ 25-06-2014 ರಂದು ಹಿಂಬರಹವನ್ನು ನೀಡಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ಹೆಂಡತಿ ಪಡೆದುಕೊಂಡ ಸಾಲಕ್ಕೆ ಗ್ಯಾರಂಟಿಯಾಗಿ ಲಕ್ಷ್ಮೀ ಕೋಂ ಆನಂದರವರು 218447 ನ ಸಂಖ್ಯೆಯ ಚೆಕ್ ಅನ್ನು ಫ್ಯೂಚರ್ ಫೈನಾನ್ಸಿಯಲ್ ಸರ್ವಿಸಸ್ ಲಿಮಿಟೆಡ್ ಗೆ ನೀಡಿದ್ದರು ಎಂದರೆ ಗೊತ್ತಿಲ್ಲ. ಜಯಮ್ಮ ಕೋಂ ರಾಮಚಂದ್ರಪ್ಪ ಹಾಗೂ ಚಂದ್ರಕಲಾ ಕೋಂ ಶ್ರೀನಿವಾಸ್ ರವರ ಸಹಿಗಳನ್ನು ಸಾಕ್ಷಿಗಳಾಗಿ ಪಡೆದುಕೊಂಡು ಸದರಿ ಫ್ಯೂಚರ್ ಫೈನಾನ್ಸಿಯಲ್ ಸರ್ವಿಸಸ್ ಲಿಮಿಟೆಡ್ ರವರು ದಿನಾಂಕ 25-06-2014 ರಂದು ಹಿಂಬರಹವನ್ನು ನೀಡಿದ್ದಾರೆ ಎಂದರೆ ಗೊತ್ತಿಲ್ಲ. ಲಕ್ಷ್ಮೀ ಕೊಂ ಆನಂದ್ ರವರು ತಮ್ಮ ಚೆಕ್ ಅನ್ನು ಹಿಂಪಡೆದ ಕಾರಣ ನನ್ನ ಹೆಂಡತಿ ಹಾಗೂ ಲಕ್ಷ್ಮೀ, ಚಂದ್ರಕಲಾ ಹಾಗೂ ಜಯಮ್ಮರವರ ಮಧ್ಯೆ ವೈಮನಸ್ಸು ಉಂಟಾಯಿತು ಎಂದರೆ ಸರಿಯಲ್ಲ. ಲಕ್ಷ್ಮೀ ಕೋಂ ಆನಂದರವರ ಚೆಕ್ ಅನ್ನು ನನ್ನ ಹೆಂಡತಿಯು ಪಡೆದುಕೊಂಡು ಅದನ್ನು ದುರುಪಯೋಗಪಡಿಸಿಕೊಂಡು ತುಮಕೂರಿನ ವಕೀಲರ ಮೂಲಕ ದಿನಂಾಕ 18-09-2014 ರಂದು ಸುಳ್ಳು ತಿಳುವಳಿಕೆ ಪತ್ರವನ್ನು ಕಳುಹಿಸಿರುತ್ತೇನೆ ಎಂದರೆ ಸಾಕ್ಷಿ ಲಕ್ಷ್ಮೀ ರವರು ನನ್ನಿಂದ ಪಡೆದ ಸಾಲಕ್ಕೆ ಸಂಬಂಧಪಟ್ಟಂತೆ ಸದರಿ ತಿಳುವಳಿಕೆ ಪತ್ರವನ್ನು ನೀಡಿದೆನು ಎಂದು ನುಡಿಯುತ್ತಾರೆ. ದಿನಾಂಕ 30-09-2014 ರಂದು ಲಕ್ಷ್ಮೀ ರವರು ತಮ್ಮ ವಕೀಲರ ಮೂಲಕ ಸದರಿ ತಿಳುವಳಿಕೆ ಪತ್ರಕ್ಕೆ ಪ್ರತ್ಯುತ್ತರ ನೀಡಿದ್ದಾರೆ ಎಂದರೆ ಸರಿ. ಸದರಿ ಪ್ರತ್ಯುತ್ತರ ನೋಟೀಸ್ ಅನ್ನು ತುಮಕೂರಿನ ವಕೀಲರು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ವಕೀಲರು ಲಕ್ಷ್ಮೀ ಕೊಂ ಆನಂದರವರಿಗೆ ಕಳುಹಿಸಿರುವ ತಿಳುವಳಿಕೆ

ಪತ್ರದ ಅಂಚೆ ಕವರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು